ಶ್ರೀ ಪಿ.ಹೆಚ್. ಪೂಜಾರ್:- ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಗುಲ್ಬರ್ಗ, ಬೆಳಗಾಂ ಮತ್ತು ಬಳ್ಳಾರಿ, ಬಿಜಾಪುರ ಭಾಗದಲ್ಲಿ ರೇಷ್ಮೆ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಬಾಗಲಕೋಟೆ ಜಿಲ್ಲೆ ಕೂಡ ವಿಶೇಷವಾಗಿ ರೇಷ್ಮೆ ಬೆಳೆಯಲಿಕ್ಕೆ ಅತ್ಯಂತ ಸೂಕ್ತವಾದ ಜಿಲ್ಲೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರೇಷ್ಮೆಯ ಬಗ್ಗೆ ವೈಜ್ಞಾನಿಕ ತಿಳುವಳಿಕೆ ವಿಶೇಷವಾದ ಮಾಹಿತಿ ಆ ಭಾಗದ ರೈತರಿಗೆ ನೀಡಲಾರದ ಕಾರಣಕ್ಕಾಗಿ ಹಾಗೆ ಆಗಿದೆ. ಪ್ರತಿ ವರ್ಷ ಸಣ್ಣ ರೈತರು ರೇಷ್ಮೆ ಕಡ್ಡಿಯನ್ನು ಅಲ್ಲಲ್ಲಿ ನೆಡುತ್ತಾರೆ. ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಅವರು ಬೆಳೆ ತೆಗೆದುಕೊಳ್ಳುತ್ತಾರೆ; ಪ್ರಚಾರ ಮಾಡುತ್ತಾ ಹೋಗುತ್ತಾರೆ. ಆಮೇಲೆ ಅದನ್ನು ಕೈಬಿಡುವಂತಹದ್ದು ನಡೆದಿದೆ. ಇಲಾಖೆಯವರು ಈ ವರ್ಷ ನೂರು ಎಕರೆಯಲ್ಲಿ ಹಿಪ್ಪನೇರಳೆ ಬೆಳೆಯುವಂತಹ ಗುರಿಯನ್ನು ಇಟ್ಟುಕೊಂಡಿರುತ್ತಾರೆ. ಹಿಂದಿನ ಮೂರು ವರ್ಷಗಳ ಇತಿಹಾಸವನ್ನು ನೋಡಿದಾಗ ಅದರಲ್ಲಿ ಯಾರೋ ನೂರು, ನೂರಐವತ್ತು ಎಕರೆ ಬಿಡುವಂತಹದ್ದು ಇದೆ. ಆ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಆ ಭಾಗದಲ್ಲಿ ಕೊಡುತ್ತಿಲ್ಲ. ಈ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಬಾಗಲಕೋಟೆಗೂ ಕೂಡ ವಿಶೇಷವಾದ ಏರಿಯಾ ಎಂದು ಪರಿಗಣನೆ ಮಾಡಿ ಅಲ್ಲಿ ಕೂಡ ಒಂದು ಕೇಂದ್ರ ಸ್ಥಾಪನೆ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ:- ಸನ್ಮಾನ್ಯ ಅಧ್ಯಕ್ಷರೇ, ನಾನು ಒಂದು ಸಣ್ಣ ಪ್ರಶ್ನೆಯನ್ನು ಕೇಳುತ್ತೇನೆ. ಉತ್ತರ ಕರ್ನಾಟಕದಲ್ಲಿ ಈ ರೇಷ್ಮೆ ಮಹಿವಾಟಿನಲ್ಲಿ ಪ್ರತಿ ಕೆ.ಜಿ. ಗೂಡಿಗೆ ಐದು ರೂಪಾಯಿ ಪ್ರೋತ್ಸಾಹ ಧನ ಎಂದು ಕೊಡುತ್ತಿದ್ದರು. ಅದನ್ನು ಈಗ ನಿಲ್ಲಿಸಿಬಿಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ. ಇಲ್ಲಿ ಕೇಳಿದರೆ ಅದನ್ನು ನಿಲ್ಲಿಸಿಲ್ಲ ಎನ್ನುತ್ತಾರೆ. ಈಗ ಎರಡು ವರ್ಷಗಳಿಂದ ರೈತರಿಗೆ ಹಣ ವಿತರಣೆಯಾಗಿಲ್ಲ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಎಂ.ರೇವಣ್ಣ:- ಮೊದಲನೆಯದಾಗಿ ಬಾಗಲಕೋಟೆ ಭಾಗದಲ್ಲಿ ರೇಷ್ಮೆ ಬೆಳೆಗಾರರಿಗೆ ತರಬೇತಿ ಕೊಡಬೇಕು ಎನ್ನತಕ್ಕಂಥ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಅವರು ಕೋಲಾರಕ್ಕೆ ಬಂದು ನೋಡಿಕೊಂಡು ಹೋಗುವಂಥ, ಇಲ್ಲಿಯ ಬೇಸಾಯ ಕ್ರಮ ಅಭ್ಯಸಿಸಲು ಇಲ್ಲಿ ಇದ್ದು ಕಲಿತುಕೊಂಡು ಹೋಗುವಂಥ ಆ ಯೋಜನೆ ನಮ್ಮಲ್ಲಿ ಇದೆ. ಅದನ್ನು ಅವರು ಉಪಯೋಗಿಸಿಕೊಳ್ಳಬಹುದು. ಎರಡನೆಯದಾಗಿ ಮಾನ್ಯ ಶಾಸಕರು ಏನು ಐದು ರೂಪಾಯಿ ಪ್ರೋತ್ಸಾಹಧನದ ಬಗ್ಗೆ ಹೇಳಿದ್ದಾರೆ. ಆಲ್ಲಿ ಅದು ಹೊಸ ಕ್ಷೇತ್ರವಾಗಿರುವುದರಿಂದ ಗೂಡು ಬೆಳೆಯುವವರಿಗೆ ಪ್ರೋತ್ಸಾಹ ಧನ ಕೊಡುವುದು ಚಾಲ್ತಿಯಲ್ಲಿದೆ ಮತ್ತು ಗೂಡನ್ನು ಬಿಚ್ಚುವಂಥವರು ಏನಿದ್ದಾರೆ, ರೀಲರ್ಸ್‌ಗೆ ಐವತ್ತು ರೂಪಾಯಿ ಕೊಡುವುದು - ಇವೆರಡೂ ಕೂಡ ಇವತ್ತಿಗೂ ಇದೆ. ಅದನ್ನು ಸರಿಯಾದ ರೀತಿಯಲ್ಲಿ ತಲುಪಿಸುವ ಕೆಲಸವನ್ನು ನಾನು ಮಾಡುತ್ತೇನೆ.

ಮಾಗಡಿ ವಿಧಾನಸಬಾ ಕ್ಷೇತ್ರದಲ್ಲಿ ಮೀನುಗಾರಿಕೆ ಹಾಗೂ ಮೀನುಗಾರರ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು

188(1504) ಶ್ರೀ ಸಿ.ಚನ್ನಿಗಪ್ಪ(ಕೊರಟಗೆರೆ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ 1999-2000ನೇ ಸಾಲಿನಿಂದ ಈವರೆವಿಗೆ ಮೀನುಗಾರಿಕೆ ಹಾಗೂ ಮೀನುಗಾರರನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?

ಬಿ) ಇವುಗಳಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ, ಎಷ್ಟು ಹಣ ಖರ್ಚು ಮಾಡಲಾಗಿದೆ, ಪ್ರತಿ ಕಾರ್ಯಕ್ರಮಗಳವಾರು ಮಾಹಿತಿ ನೀಡುವುದು, ಈ ಕಾರ್ಯಕ್ರಮಗಳ ಪ್ರಗತಿ ಯಾವ ಹಂತದಲ್ಲಿದೆ?

ಶ್ರೀ ವಸಂತ ವಿ.ಸಾಲಿಯಾನ(ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಎ) ಮಾಗಡಿ ಕ್ಷೇತ್ರದಲ್ಲಿ 1999-2000 ನೇ ಸಾಲಿನಿಂದ ಈವರೆವಿಗೆ ಮೀನುಗಾರಿಕೆ ಹಾಗೂ ಮೀನುಗಾರರನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಹುಡ್ಕೊ ನೆರವಿನ 'ಮತ್ಸ್ಯ ಶ್ರಯ' ಯೋಜನೆಯಡಿ ನಿರ್ವಸತಿ ಮೀನುಗಾರರ ಸಾಮೂಹಿಕ ವಸತಿ ಮನೆಗಳ ನಿರ್ಮಾಣ.

2. ಮೀನು ಕೃಷಿಗೆ ಯೋಗ್ಯವಾದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್:ಗುತ್ತಿಗೆ ಮೂಲಕ ವಿಲೇವಾರಿ ಮಾಡಿ ಇವರಿಂದ ಮೀನುಮರಿ ಬಿತ್ತನೆ ಮಾಡಿಸಿ ಅಭಿವೃದ್ಧಿಪಡಿಸುವುದು.

3. ಕೆರೆಗಳಲ್ಲಿ ಮೃದು ಸಸ್ಯಗಳ ನಿಯಂತ್ರಣ ಮಾಡಲು, ಹುಲ್ಲುಗೆಂಡೆ ಮೀನುಮರಿಗಳನ್ನು ದಾಸ್ತಾನು ಮಾಡುವವರಿಗೆ ಸಹಾಯ ಧನವನ್ನು ನೀಡುವುದು.

4. ಬಾವಿ, ಹೊಂಡಗಳಲ್ಲಿ ಮೀನು ಕೃಷಿ ಕೈಗೊಳ್ಳಲು ರೈತರಿಗೆ ಉಚಿತವಾಗಿ ಮೀನುಮರಿಗಳನ್ನು ಸರಬರಾಜು ಮಾಡುವುದು.

5. ಶಹರಿ ರೋಜಗಾರ್ ಯೋಜನೆಯಡಿಯಲ್ಲಿ ಮೀನು ಖಾದ್ಯಗಳ ಮಾರಾಟಕ್ಕಾಗಿ ಸಹಾಯ ಧನ.

ಬಿ) ಇವುಗಳಿಗೆ ಮಂಜೂರಾದ ಹಣ ಹಾಗೂ ವೆಚ್ಚಗಳ ಕಾರ್ಯಕ್ರಮವಾರು ವಿವರ, ಅನುಬಂಧ (1)ರಲ್ಲಿ ನೀಡಲಾಗಿದೆ.

ಅನುಬಂಧ - 1

ಸಂಖ್ಯೆ	ಕಾರ್ಯಕ್ರಮದ ವಿವರ	1999-2000		2000-2001		2001-2002		2002-2003		ಷರಾ
		ಬಿಡುಗಡೆಯಾದ ಮೊತ್ತ ರೂ. (ಲಕ್ಷ)	ಖರ್ಚು ರೂ. (ಲಕ್ಷ)	ಬಿಡುಗಡೆಯಾದ ಮೊತ್ತ ರೂ. (ಲಕ್ಷ)	ಖರ್ಚು ರೂ. (ಲಕ್ಷ)	ಬಿಡುಗಡೆಯಾದ ಮೊತ್ತ ರೂ. (ಲಕ್ಷ)	ಖರ್ಚು ರೂ. (ಲಕ್ಷ)	ಬಿಡುಗಡೆಯಾದ ಮೊತ್ತ ರೂ. (ಲಕ್ಷ)	ಖರ್ಚು ರೂ. (ಲಕ್ಷ)	
1)	ಹುಡ್ಕೊ ನೆರವಿನ ಮತ್ಸ್ಯಾಶ್ರಯ ಮನೆಗಳ ನಿರ್ಮಾಣ ಯೋಜನೆ	ಇಲ್ಲ	ಇಲ್ಲ	ಇಲ್ಲ	ಇಲ್ಲ	3.01	3.14	4.47	- -	11 ಮನೆಗಳ ಕಾಮಗಾರಿ ಮುಗಿದಿದೆ 5 ಮನೆಗಳ ಚಾವಣಿ ಕೆಲಸ ಮುಗಿದಿದೆ. 9 ಮನೆಗಳ ಅಡಿಪಾಯ ಕೆಲಸ ಮುಗಿದಿದೆ.
2)	ಕೆರೆಗಳಲ್ಲಿ ಮೀನುಮರಿಗಳ ಬಿತ್ತನೆ ಮಾಡುವುದು	0.25	0.25	0.30	0.30	0.30	0.30	0.25	-	-
3)	ಹುಲ್ಲುಗೆಂಡೆ ಮೀನುಮರಿಗಳಿಗೆ ಸಹಾಯಧನ ನೀಡುವುದು	0.04	0.04	0.10	0.10	0.10	0.10	0.08	-	-
4)	ಬಾವಿ ಹೊಂಡಗಳಿಗೆ ಉಚಿತವಾಗಿ ಮೀನುಮರಿ ಸರಬರಾಜು ಮಾಡುವುದು	0.13	0.13	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ	-	-
5)	ಶಹರಿ ರೋಜಗಾರ ಯೋಜನೆ ಅಡಿಯಲ್ಲಿ ಮೀನು ಖಾದ್ಯಗಳ ಮಾರಾಟಕ್ಕೆ ಸಹಾಯಧನ ಸಂಖ್ಯೆ: ಪಸಂಮೀ 138 ಮೀಇಯೋ 2002	0.06	0.06	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ	-

ಶ್ರೀ ಸಿ.ಚನ್ನಿಗಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಉತ್ತರದಲ್ಲಿ ಏನು ಹೇಳಿದ್ದಾರೆ ಎಂದರೆ, ಬಾವಿ ಮತ್ತು ಹೊಂಡಗಳಿಗೆ ಉಚಿತವಾಗಿ ಮೀನುಮರಿಗಳನ್ನು ಬಿಡಲಾಗಿದೆ ಎಂದು ಹೇಳಿದ್ದಾರೆ. ಶಹರಿ ರೋಜಗಾರ್ ಯೋಜನೆಯಡಿಯಲ್ಲಿ ಮೀನು ಖಾದ್ಯಗಳ ಮಾರಾಟಕ್ಕೆ ಸಹಾಯಧನ ಕೊಡುವುದರ ಬಗ್ಗೆ ಹೇಳುತ್ತಾ 'ಇಲ್ಲ'ಇಲ್ಲ' ಎಂದು ಎಲ್ಲಾ ಕಾಲಮ್‌ನಲ್ಲಿ ತೋರಿಸಿದ್ದಾರೆ. ಇವತ್ತು ಬೇಸಿಗೆಯಲ್ಲಿ ಯಾವ ಕೆರೆಯಲ್ಲೂ ನೀರು ತುಂಬುವುದಿಲ್ಲ. ಇವತ್ತು ನೆಲಮಂಗಲ ತಾಲ್ಲೂಕು ಆಗಬಹುದು, ಮಾಗಡಿ ತಾಲ್ಲೂಕು ಆಗಬಹುದು, ಕೊರಟಗೆರೆ ತಾಲ್ಲೂಕು ಆಗಬಹುದು, ಆ ತಾಲ್ಲೂಕುಗಳಲ್ಲಿ ಈ ಪರಿಸ್ಥಿತಿ ಇದೆ. ಆದ್ದರಿಂದ ಇದುವರೆಗೂ ಸರ್ಕಾರದಿಂದ ಈ ಮೀನುಗಾರರಿಗೆ ಅನುಕೂಲ ಮಾಡಿಕೊಟ್ಟಿಲ್ಲ. ದಯವಿಟ್ಟು ಈ ಇಲಾಖೆಯನ್ನು ಡಿವಿಜನ್‌ವೈಸ್ ಮಾಡಿ ಮುಚ್ಚಿದರೆ ಬಹಳ ಒಳ್ಳೆಯದಾಗುತ್ತದೆ, ಸರ್ಕಾರಕ್ಕೆ ಅನುಕೂಲವಾಗುತ್ತದೆ, ಜನರಿಗೂ ಅನುಕೂಲವಾಗುತ್ತದೆ. ಇವತ್ತು ಏನು ಮೀನುಗಾರಿಕೆ ಕೆರೆಗಳಿಗೆ ಮೀನುಗಳನ್ನು ಬಿಡುತ್ತೇವೆ ಎಂದು ಹೇಳಿದ್ದಾರೆ, ಈ ಎಲ್ಲಾ ಮಾಹಿತಿಗಳೂ ಸತ್ಯಕ್ಕೆ ದೂರವಾದದ್ದು. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವಸಂತ ವಿ. ಸಾಲಿಯಾನ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಒಳನಾಡು ಮೀನುಗಾರಿಕೆ ಬಗ್ಗೆ ಕೆಲವೊಂದು ಪ್ರಶ್ನೆಗಳನ್ನು ಕೇಳಿದ್ದಾರೆ. ಅದಕ್ಕೆ ನಾನು ಸರಿಯಾಗಿ ಉತ್ತರ ಕೊಟ್ಟಿದ್ದೇನೆ. ಇದರಲ್ಲಿ 1999-2000ನೇ ಇಸವಿಯಲ್ಲಿ ಮೀನುಗಾರರಿಗೆ ಎಷ್ಟು ಮನೆಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ. 1999-2000ನೇ ಇಸವಿಯಲ್ಲಿ ಆ ವರ್ಷದಲ್ಲಿ ಮನೆ ಕೊಟ್ಟಿಲ್ಲ. 2000-01ಕ್ಕೆ 25 ಮನೆಗಳನ್ನು ಒದಗಿಸಿಕೊಟ್ಟಿದ್ದೇವೆ. 2001-02ಕ್ಕೆ 35 ಮನೆಗಳನ್ನು ಒದಗಿಸಿಕೊಟ್ಟಿದ್ದೇವೆ. 2002-03ಕ್ಕೆ 35 ಮನೆಗಳನ್ನು, ಒಟ್ಟಿಗೆ 95 ಮನೆಗಳನ್ನು ಆ ವಿಧಾನಸಭಾ ಕ್ಷೇತ್ರಕ್ಕೆ ನಾವು ಕೊಟ್ಟಿದ್ದೇವೆ. ಎರಡನೆಯದಾಗಿ ಮೀನುಕೃಷಿ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಒಂದನೆಯದಾಗಿ ಮೀನುಮರಿ ಬೆಳೆಸುವಂತಹ ಕೆರೆಗಳು - 1999-2000ನೇ ಇಸವಿಗೆ 29 ಕೆರೆಗಳಲ್ಲಿ 6 ಲಕ್ಷ 32ಸಾವಿರ ಮೀನುಮರಿಗಳನ್ನು ನಾವು ಬಿಟ್ಟಿದ್ದೇವೆ. ಇದೇ ರೀತಿಯಲ್ಲಿ 2000-01ಕ್ಕೆ 31 ಕೆರೆಗಳಲ್ಲಿ 6 ಲಕ್ಷ 50 ಸಾವಿರಕ ಮೀನುಮರಿಗಳನ್ನು ಬಿಟ್ಟಿದ್ದೇವೆ. 2001-02ನೇ ಇಸವಿಯಲ್ಲಿ 33 ಕೆರೆಗಳಲ್ಲಿ 8ಲಕ್ಷ 5ಸಾವಿರ ಮೀನುಮರಿಗಳನ್ನು ಬಿಟ್ಟಿದ್ದೇವೆ. ಮೂರನೆಯದಾಗಿ ಮಾನ್ಯ ಸದಸ್ಯರು ಹುಲ್ಲುಗೆಂಡೆ ಮೀನುಮರಿ ಬಗ್ಗೆ ಹೇಳಿದ್ದಾರೆ. 1999-2000ನೇ ಇಸವಿಯಲ್ಲಿ 20 ಸಾವಿರ ಮೀನುಮರಿಗಳನ್ನು ಬಿಟ್ಟಿದ್ದೇವೆ, 2000-01ಕ್ಕೆ 50 ಸಾವಿರ ಮೀನುಮರಿಗಳನ್ನು ಮತ್ತು 2001-02ಕ್ಕೆ 60 ಸಾವಿರ ಮೀನುಮರಿಗಳನ್ನು ಬಿಟ್ಟಿದ್ದೇವೆ. ಮೂರನೆಯದಾಗಿ ಕೆರೆಗಳನ್ನು ಗುತ್ತಿಗೆಮೇಲೆ ಯಾವರೀತಿ ಕೊಡುವುದೆಂದು ಕೇಳಿದ್ದಾರೆ. ಈಗ ಕೆರೆಗಳ ಗುತ್ತಿಗೆಯನ್ನು ನಾವು ಮೊದಲನೆಯದಾಗಿ ಮೀನುಗಾರರ ಸಹಕಾರ ಸಂಘಗಳಿಗೆ ಕೊಡುತ್ತೇವೆ. ಎರಡನೆಯದಾಗಿ ಅಲ್ಲಿ ಪರಿಶಿಷ್ಟ ವರ್ಗದ ಸಹಕಾರ ಸಂಘಗಳು ಇದ್ದರೆ ಅವರಿಗೆ ಕೊಡುತ್ತೇವೆ. ಮೂರನೆಯದಾಗಿ ಅಲ್ಲಿ ಮಹಿಳಾ ಮತ್ತು ಯುವಕ ಮಂಡಳಿಗಳಲ್ಲಿ ತರಬೇತಿ ಹೊಂದಿದಂಥ ಯುವಕರಿಗೆ ಕೊಡುತ್ತೇವೆ. ಅಲ್ಲಿ ಇಲ್ಲದಿದ್ದರೆ ಗ್ರಾಮ ಪಂಚಾಯತಿಗಳಿಗೆ ಟೆಂಡರ್ ಕರೆದು ನಾವು ಕೊಡುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಇದೇರೀತಿಯಲ್ಲಿ ಮಾನ್ಯ ಸದಸ್ಯರು ಮೀನು ಸಾಕಾಣಿಕೆ ಬಗ್ಗೆ ಒಂದು ಪ್ರಶ್ನೆ ಕೇಳಿದ್ದಾರೆ. ಮೀನು ಸಾಕಣಿಗೆ ನಾವು ಒಂದು ಎಕರೆಗೆ 30 ಸಾವಿರ ರೂಪಾಯಿಗಳ ಸಹಾಯಧನ ಕೊಡುತ್ತಿದ್ದೇವೆ. ಅದೇ ರೀತಿಯಲ್ಲಿ ಒಂದು ಶಾಖನಿರೋಧ ಪೆಟ್ಟಿಗೆ ಮತ್ತು ಒಂದು ಸೈಕಲ್ ಅನ್ನು

2500ರೂಪಾಯಿಗಳಿಗೆ ಕೊಡುತ್ತಿದ್ದು, ಅದರಲ್ಲಿ 50 ಪರ್ಸೆಂಟ್ ಸಬ್ಸಿಡಿಯಾಗಿ 1250 ರೂಪಾಯಿಗಳನ್ನು ಕೊಡುತ್ತೇವೆ. ಅದೇ ರೀತಿ ದ್ವಿಚಕ್ರ-ಟೆಂಪೋವನ್ನು ಒಂದು ಲಕ್ಷ ರೂಪಾಯಿಯಲ್ಲಿ 25 ಪರ್ಸೆಂಟ್ ಅಂದರೆ ಸುಮಾರು 25 ಸಾವಿರ ರೂಪಾಯಿಗಳನ್ನು ಸಬ್ಸಿಡಿ ಎಂದು ಕೊಡುತ್ತೇವೆ. ಅದೇರೀತಿ ಖಾಸಗಿ ಮೀನುಕೊಳದಲ್ಲಿ ಮೀನು ಬೆಳೆಸುವವರಿಗೆ ಒಂದು ಎಕರೆಗೆ ಹತ್ತು ಸಾವಿರ ರೂಪಾಯಿ ಎಂದು ನಾವು ಕೊಡುತ್ತೇವೆ.

ಶ್ರೀ ಸಿ.ಚನ್ನಿಗಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಇದು ಯಾವುದೂ ಇಲ್ಲ.

(ಗೊಂದಲ)

ಅಧ್ಯಕ್ಷರು:- ಬೇರೆ ಯಾರಿಗೂ ಅವಕಾಶ ಇಲ್ಲ. ಅದು ಮಾಗಡಿಗೆ ಸಂಬಂಧಪಟ್ಟಂತಹ ಪ್ರಶ್ನೆ.

ಶ್ರೀ ವಸಂತ ಎ.ಸಾಲಿಯಾನ:- ಮಾನ್ಯ ಸದಸ್ಯರಿಗೆ ಮಾಗಡಿ ಕ್ಷೇತ್ರದ ಬಗ್ಗೆ ವಿವರವಾದ ಉತ್ತರವನ್ನು ನಾನು ಕೊಟ್ಟಿದ್ದೇನೆ.

ಅಧ್ಯಕ್ಷರು:- ಮುಂದಿನ ಪ್ರಶ್ನೆ.....

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಮಾಹಿತಿ ಕೊಟ್ಟಿಲ್ಲ.

ಅಧ್ಯಕ್ಷರು:- ಅದು ಮಾಗಡಿಗೆ ಮಾತ್ರ ಸೀಮಿತವಾದ ಪ್ರಶ್ನೆ. ಮಾನ್ಯ ಗುರುಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಟ್ಟರೆ ಬೇರೆಯವರೂ ಕೇಳುತ್ತಾರೆ.

ಸರ್ಕಾರಿ ಟೂಲ್‌ರೂಂ ನಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರುಗಳಿಗೆ ನೀಡಿರುವ ಮುಂಬಡ್ತಿ ವಿವರಗಳು

189(1513) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಟೂಲ್ ರೂಂನಲ್ಲಿ ಎಷ್ಟು ಜನ ನೌಕರರು ಸೇವೆ ಸಲ್ಲಿಸುತ್ತಿದ್ದಾರೆ?

ಇಲ್ಲಿ ಒಟ್ಟು ಮಂಜೂರಾದ ಹುದ್ದೆಗಳು ಎಷ್ಟು?

ಅವುಗಳು ಯಾವುವು?

ಆ) ಸದರಿ ಸರ್ಕಾರಿ ಟೂಲ್‌ರೂಂಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರುಗಳಿಗೆ ಪದೋನ್ನತಿ (ಮುಂಬಡ್ತಿ)ನೀಡಲಾಗಿದೆಯೇ?

ಯಾರು ಯಾರಿಗೆ ಯಾವ ಯಾವ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿದೆ, ವಿವರ ನೀಡುವುದು?

ಪೂರ್ಣ ಪ್ರಮಾಣದಲ್ಲಿ ಎಲ್ಲರಿಗೂ ಕಾನೂನನ್ವಯ ಪದೋನ್ನತಿ ನೀಡಲಾಗಿದೆಯೇ? ಇಲ್ಲದೇ ಇದ್ದಲ್ಲಿ ಕಾರಣವೇನು?

ಇ) ಪದೋನ್ನತಿ (ಮುಂಬಡ್ತಿ) ಬಗ್ಗೆ ಇಲಾಖಾ ನೌಕರರು ನ್ಯಾಯಾಲಯದ ಮೊರೆ ಹೋಗಿದ್ದಾರೆಯೇ? ಹೋಗಿದ್ದಲ್ಲಿ ನ್ಯಾಯಾಲಯವು ನೌಕರರ ಪರವಾಗಿ ಆದೇಶ ನೀಡಿದೆಯೇ? ವಿವರ ನೀಡುವುದು?